ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಥ ದಾಕ್ಷಿಣ್ಯಕ್ಕೊಳಗಾಗಿರತಕ್ಕ ನಿದರ್ಶನಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಮುಂಜಪ್ಪ ಉರ್ಲ್ಸ್.—ಪೋಲೀಸ್ ಶಿಬ್ಬಂದಿಗೆ ವಾಸದ ಮನೆಗಳನ್ನು ಕಟ್ಟಿಸಲು ಏನಾದರೂ ಒಂದು ಯೋಜನೆಯನ್ನು ಮಾಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದ್ದೇವೆ. 1961-62ನೇ ಸಾಲಿನಲ್ಲಿ ಎರಡು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೆಡ್-ಕಾನ್ಸ್ಟೇಬಲ್ಸ್, ಕಾನ್ಸ್ಟೇಬಲ್ಸ್ ಮತ್ತು ಕೆಲವು ಸಬ್-ಇನ್ಸ್ಪೆಕ್ಟರುಗಳಿಗೆ ವಾಸದ ಮನೆಗಳನ್ನು ಕಟ್ಟಿಸುವ ಒಂದು ಯೋಜನೆ ಸರ್ಕಾರದವರ ಮುಂದಿದೆ.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಈಗ ತಾನೆ ಮಂತ್ರಿಗಳು ಇವರನ್ನು ಕಕ್ಷಿಗಾರರ ಮನೆಯಲ್ಲಿ ಇರಬಾರದೆಂದು ಹೇಳಿದ್ದಾರೆ. ಆಗಾದರೆ ಇವರು ರಾಯರುಗಳೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಕೋರ್ಟಿಗೆ ಬಂದು ಒಂದು ಪಾರ್ಟಿಯಾಗಿ ನಿಲ್ಲುವುದರಿಂದ ಹಾಗೆ ಹೇಳಿದ್ದಾರೆ. ಆದರೆ ಅವರು ರಾಯರಲ್ಲ.

SANCTION OF A VETERINARY DISPENSARY FOR YELDUR IN SRINIVASPUR TALUK.

*Q.—498. Sri B. L. NARAYANA SWAMY (Mulbagal).—

Will the Government be pleased to state:—

the reasons for not sanctioning a Veterinary Dispensary for Yeldur in Srinivaspur Taluk, Kolar District, though the matter is before the Government for the past 12 years and in spite of subsequent assurances made for the compliance?

A.—Sri N. RACHAIAH (Minister for Agriculture and Social Welfare).—

Srinivaspur taluk in which Yeldur is situated, has secured its quota of two Veterinary Dispensaries for its cattle population of 58,096. The Kolar District has also secured its quota of Veterinary Dispensaries for its cattle population of 6,16,775. There are more needy areas in the State which have to be first attended to for providing Veterinary aid.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಸ್ವಾಮೀ, ಕಳೆದ ವರ್ಷವೇ ಈ ಯಲ್ದೂರಿಗೆ ಒಂದು ವೆಟರಿನೆರಿ ಆಸ್ಪತ್ರೆಯನ್ನು ಕೊಡುತ್ತೇವೆಂದು ಸರ್ಕಾರದವರು ಭರವಸೆ ಕೊಟ್ಟರಲ್ಲವೇ

†ಶ್ರೀ ಎನ್. ರಾಚಯ್ಯ.—ನಮಗೆ ಬಂದಿರತಕ್ಕ ರಿಪೋರ್ಟಿನಲ್ಲಿ ಅಲ್ಲಿ ಹೆಚ್ಚು ಪಶು ವೈದ್ಯಶಾಲೆಗಳಿರುತ್ತವೆಂದು ಗೊತ್ತಾದ್ದರಿಂದ ಅಲ್ಲಿಗೆ ಮತ್ತೊಂದು ಆಸ್ಪತ್ರೆಯನ್ನು ಕೊಡಲು ಸಾಧ್ಯವಾಗಲಿಲ್ಲ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಕಳೆದ 12 ವರ್ಷಗಳಿಂದಲೂ ಪ್ರಯತ್ನ ನಡೆಸಿದ್ದುದರ ಪರಿಣಾಮವಿಷ್ಟೇನೇನು? ಈ ಆಸ್ಪತ್ರೆಗಳನ್ನು ಕೊಡಲು ಸರ್ಕಾರದವರ ತತ್ವ ನೀತಿಗಳೇನು?

ಶ್ರೀ ಎಚ್. ರಾಜಯ್ಯ.—ನಮಗೆ ವರದಿ ಬಂದಿರತಕ್ಕ ಪ್ರಕಾರ ಅಲ್ಲಿ 58,960 ಜಾನುವಾರುಗಳಿರುತ್ತವೆ. ಅಷ್ಟಕ್ಕೆ ಸಾಕಷ್ಟು ಆಸ್ಪತ್ರೆಗಳು ಈಗಾಗಲೇ ಅಲ್ಲಿರುತ್ತವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ತಾವು ಹೇಳತಕ್ಕ ಸಂಖ್ಯೆ ಯಾವ ವರ್ಷದ ಸೆನ್ಸಸ್ ಪ್ರಕಾರ?

ಶ್ರೀ ಎಚ್. ರಾಜಯ್ಯ.—ಹಾಲಿ ನಮ್ಮಲ್ಲಿರತಕ್ಕ ಅಂಕಿ ಅಂಶಗಳ ಪ್ರಕಾರ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಈಗ ಅಲ್ಲಿ 80 ಸಾವಿರಕ್ಕೂ ಹೆಚ್ಚಾಗಿ ಜಾನುವಾರುಗಳಿರುತ್ತವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ರಾಜಯ್ಯ.—ಹಾಗೆ ಜಾನುವಾರುಗಳ ಸಂಖ್ಯೆ ಎಲ್ಲಿ ಹೆಚ್ಚಾಗಿದೆಯೋ ಅಲ್ಲಿಗೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಆಸ್ಪತ್ರೆಗಳನ್ನು ಕೊಡರಾಗುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಒಂದು ತಾಲ್ಲೂಕಿಗೆ ಎಷ್ಟು ಈ ಕೋಟ ಇರಬೇಕೆಂದು ನಿಗದಿ ಮಾಡಿದ್ದಾರೆ?

ಶ್ರೀ ಎಚ್. ರಾಜಯ್ಯ.—ಜಾನುವಾರು ಸಂಖ್ಯೆ ನೋಡಿಕೊಂಡು ಮಾಡರಾಗುತ್ತೆ. ತಾಲ್ಲೂಕಿಗಿಷ್ಟು ಕೋಟ ಎಂತ ಏನೂ ನಿಗದಿ ಮಾಡಿಲ್ಲ. ಈಗ ಹಾಲಿ ಕೋಲಾರ ಜಿಲ್ಲೆಯಲ್ಲಿ ಆರು ಲಕ್ಷ ಜಾನುವಾರುಗಳಿವೆ. ಅಲ್ಲಿ 26 ಪಶುವೈದ್ಯಶಾಲೆ ಇರುತ್ತವೆ.

—

REPAIRS TO THE BUILDING OF DISTRICT BOARD HIGH SCHOOL AT SRINIVASPUR.

*Q.—500. Sri B. L. NARAYANASWAMY (Mulbagal).

Will the Government be pleased to state:—

(*a*) whether it has come to the notice of the Government that the District Board High School building at Srinivaspur is without annual repairs for the past 10 years ;

(*b*) the arrangements made for the maintenance of such schools consequent upon the abolition of the District Boards?

A.—Sri T. SUBRAMANYA (Minister for Development and Local Self-Government).—

(*a*) Yes.

(*b*) They are to be maintained by the Government through the agency of the Deputy Commissioners. These High School buildings which were constructed out of the funds of the former District Boards vest, at present, with Government.

ಶ್ರೀ ಬಿ.ಎಲ್. ನಾರಾಯಣಸ್ವಾಮಿ.—ಕಳೆದ ಹತ್ತು ವರ್ಷಗಳಿಂದಲೂ ಈ ಕಟ್ಟಡ ಹೀಗೇ ಬಿದ್ದಿದ್ದರೆ ಇದರ ಗತಿಯೇನಾಗಬೇಕು ಸ್ವಾಮಿ?

ಶ್ರೀ ಟಿ. ಸುಬ್ರಮಣ್ಯ.—ಈ ಕಟ್ಟಡ ಆದುದ್ದೇ 1954-55ರಲ್ಲಿ. ಆದರೆ ಈ ಕಟ್ಟಡ ಆಗುವಾಗಲೇ ಇದರಲ್ಲಿ ಸ್ವಲ್ಪ ನ್ಯೂನತೆಗಳಿದ್ದವು. ಅದನ್ನು ಆ ಕಟ್ಟಡದ ಕಂಟ್ರಾಕ್ಟರ್ ಸರಿಪಡಿಸಬೇಕಾಗಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಈಗ 6-7 ವರ್ಷಗಳಿಂದಲೂ ಆದ ಪ್ರಗತಿ ಇಷ್ಟೇನೇ? ಈ ಬದುಕಿಗೆ ಯಾರು ಜವಾಬ್ದಾರರು ಆ ಲೋಪದೋಷಣಗಳನ್ನು ನಡೆಸಿದವರು ಯಾರು, ಅದಕ್ಕೆ ಕಾರಣವೇನು ?